**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸದುರ್ಗ.**

**ಅಸಲು ದಾವಾ ಸಂಖ್ಯೆ. 183/2015**
**ವಾ.ಸಾ-3**

**ಸಾಕ್ಷಿಗೆ ದಿನಾಂಕ 24.11.2021 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಶ್ರೀ ಡಿ ಎನ್ ಎಂ ಪ್ರತಿವಾದಿಯರ ಪರ ವಕೀಲರಿಂದ**

1. ಈ ದಿನ ನ್ಯಾಯಾಲಯಕ್ಕೆ ನನ್ನೊಂದಿಗೆ ನನ್ನ ಅಣ್ಣ ಮಲ್ಲೇಶಪ್ಪನವರು ಬಂದಿದ್ದಾರೆ. ಈದಾವೆಗೆ ಸಂಬಂಧಪಟ್ಟಂತೆ ನನ್ನ ಅಣ್ಣ ಮಲ್ಲೇಶಪ್ಪನವರೇ ಒಡಾಡುತ್ತಿದ್ದಾರೆ ಎಂದರೆ ಸರಿ. ಸದರಿ ನನ್ನ ಅಣ್ಣನ ಸಹಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಸಾಕ್ಷಿಗೆ ಮೂಲ ವಾದ ಪತ್ರವನ್ನು ತೋರಿಸಿ ಸದರಿ ಮೂಲ ವಾದ ಪತ್ರದಲ್ಲಿರುವ ಮಲ್ಲೇಶ ಎಂಬ ಸಹಿಯನ್ನು ಸಾಕ್ಷಿಯು ನೋಡಿ, ಸದರಿ ಸಹಿ ನನ್ನ ಅಣ್ಣ ಮಲ್ಲೇಶಪ್ಪನದ್ದೆ ಎಂದು ಗುರುತಿಸಿರುತ್ತಾರೆ. **ಸದರಿ ಮೂಲ ವಾದಪತ್ರದಲ್ಲಿರುವ ಮಲ್ಲೇಶ ಎಂಬ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಡಿ-1 ಎಂದು ಗುರುತಿಸಲಾಯಿತು.**

2. ಈ ದಾವೆಯ ವಿಚಾರವಾಗಿ ತಿಮ್ಮಣ್ಣನ ಮಕ್ಕಳಾದ ವಾದಿಯರು ಯಾವತ್ತೂ ಕೂಡ ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯರೇ ದಾವೆ ಹೂಡಿದ್ದಾರೆ ಆದರೆ ದಾವೆ ನಡೆಸಲು ನಮ್ಮ ಅಣ್ಣ ಬರುತ್ತಿದ್ದಾರೆ ಎಂದು ನುಡಿಯುವರು.

3. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಪ್ರಸ್ತುತ ದಾವೆಯನ್ನು ಯಾರು ಯಾರ ವಿರುದ್ದ ಮತ್ತು ಯಾವ ಪರಿಹಾರ ಕೇಳಿ ಹೂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ದಾವಾ ಜಮೀನಿನ ಮೋಜಣಿ ಸಂಖ್ಯೆ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸಾಕ್ಷಿಯು

ಮುಂದುವರೆದು ಚೆಕ್ಕು ಬಂದಿ ತಿಳಿದಿದೆ ಮತ್ತು ಪೂರ್ವಕ್ಕೆ-ಜಯಮ್ಮನವರ ಜಮೀನು, ಪಶ್ಚಿಮಕ್ಕೆ-ಗಂಗಜ್ಜಿ ಅಲಿಯಾಸ್ ಗಂಗಮ್ಮನವರ ಜಮೀನು, ಉತ್ತರಕ್ಕೆ-ಕೊಲ್ಡಪ್ಪ ತಿಮ್ಮಯ್ಯರವರ ಜಮೀನು, ದಕ್ಷಿಣಕ್ಕೆ-ಕೆ.ಬಿ. ಸ್ವಾಮಿಯವರ ಜಮೀನು ಎಂದು ನುಡಿಯುವರು.

4. ನನ್ನ ಪ್ರಮಾಣ ಪತ್ರದಲ್ಲಿ ಹೇಳಿದಂತೆ ದಾವಾ ಜಮೀನಿನ ಖರೀದಿ ಪತ್ರದ ನಿರ್ಧಿಷವಾದ ದಿನಾಂಕ ನನಗೆ ಗೊತ್ತಿಲ್ಲ. ಆದರೆ ಸುಮಾರು 50 ವರ್ಷಗಳ ಹಿಂದೆ ಖರೀದಿಯಾಗಿದೆ. ಸದರಿ ಖರೀದಿ ಪತ್ರವನ್ನು ನಾನು ನೋಡಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿದಂತೆ ದಾವಾ ಜಮೀನಿನ ಹಿಂದಿನ ಮಾಲೀಕರಾದ ಗೋವಿಂದಪ್ಪನವರನ್ನು ನಾನು ನೋಡಿದ್ದೇನೆ. ಸದರಿ ಗೋವಿಂದಪ್ಪನವರಿಗೆ ಒಬ್ಬ ಬಸಪ್ಪ ಎಂಬ ಸಹೋದರ ಇದ್ದರು. ಪ್ರತಿವಾದಿಯರು ಮೃತ ಬಸಪ್ಪನ ವಾರಸುದಾರರು ಎಂದರೆ ಸರಿ. ಸದರಿ ಗೋವಿಂದಪ್ಪನವರು ಸುಮಾರು 70 ವರ್ಷಗಳ ಹಿಂದೆ ಊರು ಬಿಟ್ಟು ಹೋಗಿದ್ದಾರೆ ಎಂದರೆ ಸಾಕ್ಷಿಯು ಹೋಗಿರಬಹುದು ನಾನು ಕೂಡ ಮಾಹಿತಿ ಕೇಳಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಗೋವಿಂದಪ್ಪನವರು ಮಾನಸಿಕ ಅಸ್ವಸ್ಥರಾಗಿದ್ದರು ಆದ್ದರಿಂದ ಊರು ಬಿಟ್ಟು ಹೊಗಿದ್ದರು ಎಂದರೆ ಸರಿಯಲ್ಲ. ಸದರಿಯವರು ಬದುಕಿರುವ ಅಥವಾ ಮೃತರಾಗಿರುವ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

5. ಸದರಿ ಗೋವಿಂದಪ್ಪ ಮತ್ತು ಬಸಪ್ಪರವರ ತಂದೆಯ ಆಸ್ತಿಯನ್ನು ಬಸಪ್ಪನವರೇ ಸ್ವಾಧೀನಾನುಭೋಗದಲ್ಲಿ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 12 ಗುಂಟೆ ಜಮೀನಿನಲ್ಲಿ ತಿಮ್ಮಪ್ಪನವರೇ ಸ್ವಾಧೀನಾನುಭೋಗದಲ್ಲಿದ್ದಾರೆ ಎಂದು ನುಡಿಯುವರು. ಸದರಿ ಗೋವಿಂದಪ್ಪನವರಿಗೆ ಮದುವೆಯಾಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿಯವರಿಗೆ ಮದುವೆಯಾಗಿತ್ತು, ಅವರ ಒಬ್ಬ ಮಗಳನ್ನು

ನಾನು ನೋಡಿರುತ್ತೇನೆ ಎಂದು ನುಡಿಯುವರು. ಸದರಿ ಮಗಳ ಹೆಸರು ಮತ್ತು ವಿಳಾಸ ನನಗೆ ಗೊತ್ತಿಲ್ಲ.

6. ಸದರಿ ಗೋವಿಂದಪ್ಪನವರು ಮನೆ ಬಿಟ್ಟು ಹೋದ ನಂತರ ಯಾವುದೇ ಪಾಲು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಪಾಲು ವಿಭಾಗ ಯಾವ ವರ್ಷದಲ್ಲಿ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸುಮಾರು 50-55 ವರ್ಷಗಳ ಹಿಂದೆ ಮಾಡಿಕೊಂಡಿರಬಹುದು ಎಂದು ನುಡಿಯುವರು. ಸದರಿಯವರ ಕುಟುಂಬಕ್ಕೆ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಸದರಿ ಪಾಲು ವಿಭಾಗದಲ್ಲಿ ಗೋವಿಂದಪ್ಪನಿಗೆ ಮತ್ತು ಬಸಪ್ಪನಿಗೆ ಯಾವ ಯಾವ ಜಮೀನು ಬಂದವು ಎಂದು ನನಗೆ ಗೊತ್ತಿಲ್ಲ. ಸದರಿ ಪಾಲು ವಿಭಾಗದ ಕಾಲಕ್ಕೆ ನಾನು ಹೋಗಿರಲಿಲ್ಲ. ನನಗೆ ಪ್ರಸ್ತುತ 56 ವರ್ಷ ವಯಸ್ಸು.

7. ದಾವಾ ಜಮೀನು ಮೊದಲು ಮೃತ ಬಸಪ್ಪನ ಹೆಸರಿನಲ್ಲಿದ್ದವು. ನಂತರ ಪ್ರತಿವಾದಿಯರ ಹೆಸರಿಗೆ ಬಂದಿವೆ ಎಂದರೆ ಸರಿಯಲ್ಲ. ಪ್ರತಿವಾದಿಯರೇ ದಾವಾ ಜಮೀನಿನ ಸ್ವಾಧೀನಾನುಭೋಗದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರೇ ದಾವಾ ಜಮೀನಿನ ಮಾಲೀಕರು ಮತ್ತು ವಾದಿಯರಿಗೆ ಯಾವುದೇ ರೀತಿಯ ಸಂಬಂಧವಿಲ್ಲ ಎಂದರೆ ಸರಿಯಲ್ಲ.

8. ವಾದಿಯರಿಗೆ ರತ್ನಮ್ಮ, ಲಕ್ಷ್ಮಿ ಮತ್ತು ಅನುಸೂಯಮ್ಮ ಎಂಬ ಅಕ್ಕ ತಂಗಿಯರು ಹಾಗೂ ತಾಯಿ ಕಿಟ್ಟಮ್ಮ ಎಂಬುವವರು ಇದ್ದಾರೆ ಎಂದರೆ ಸರಿ. ವಾದಿಯರ ತಂದೆ ಮತ್ತು ನನ್ನ ತಂದೆ ಸ್ವಂತ ಅಣ್ಣತಮ್ಮಂದಿರು ಎಂದರೆ ಸರಿ. ದಾವಾ ಜಮೀನು ಗೊರವಿನಕಲ್ಲು ಗ್ರಾಮಕ್ಕೆ ಹೊಂದಿಕೊಂಡಿದೆ ಎಂದರೆ ಸರಿ. ದಾವಾ ಜಮೀನು ಬೆಲೆ ಬಾಳುವ ಆಸ್ತಿ ಎಂದರೆ ಸರಿ. ದಾವಾ ಜಮೀನು ಕಬಳಿಸುವ ಉದ್ದೇಶದಿಂದ ನಾನು ಮತ್ತು ನನ್ನ ಅಣ್ಣ ವಾದಿಯರಿಗೆ ಪ್ರೇರೇಪಿಸಿ

ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವೆಯ ಬಗ್ಗೆ ಯಾವುದೇ ವಿಷಯಗಳು ತಿಳಿಯದೇ ಇದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ. ನನ್ನ ಸಮಕ್ಷಮ

**ಪ್ರಧಾನ ಸಿವ್ಹಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**